
ಸಂಪಾದಕೀಯ

# ಸ್ವಾಮೀಜಿ ಕಂಡ ಭವಿಷ್ಯ ಭಾರತ



“ನವೀನ ಭಾರತವೇಳಲಿ. ಕೃಷಿಕನ ದರಿದ್ರ ನಿವಾಸದಿಂದ ನೇಗಿಲನ್ನು ಹಿಡಿದ ನವೀನ ಭಾರತವು ಮೈದೋರಲಿ. ಬೆಸ್ತನ ಜೋಪಡಿಯಿಂದ, ಚಮ್ಮಾರ, ಜಾಡಮಾಲಿಗಳ ಬಡ ಗುಡಿಸಿಲಿನಿಂದ, ಅದು ಹೊರಹೊಮ್ಮಲಿ. ಮಳಿಗೆಯಿಂದ, ಕಾರ್ಖಾನೆಯಿಂದ, ಅಂಗಡಿಯಿಂದ, ಸಂತೆಯಿಂದ ಆಕೆ ಪ್ರತ್ಯಕ್ಷವಾಗಲಿ. ಪರ್ವತ ಕಾನನಗಳಿಂದ, ಕಂದರವನಗಳಿಂದ ನವಭಾರತದ ಮೂರ್ತಿ ರೂಪುಗೊಳ್ಳಲಿ. ಸಾಮಾನ್ಯ ಜನರು ಸಹಸ್ರಾರು ವರುಷದಿಂದ ಕ್ರೌರ್ಯಕ್ಕೆ ಒಳಗಾಗಿದ್ದಾರೆ. ಕ್ರೂರ ಪದಾಘಾತವನ್ನು ಗೊಣಗಾಡದೆ ಸಹಿಸಿ ಸಹಿಸಿ ಅವರಲ್ಲೊಂದು ಅದ್ಭುತ ಸಹಿಷ್ಣುತೆ ತಲೆದೋರಿದೆ. ಅನಂತ ದುಃಖಭಾಜನರಾದುದರಿಂದ ಅಮಿತ ಶಕ್ತಿಶಾಲಿಗಳಾಗಿದ್ದಾರೆ. ಬೊಗಸೆ ಗಂಜಿಯನ್ನು ಕುಡಿದು ಜೀವಿಸುತ್ತಿದ್ದು, ಅವರು ಲೋಕವನ್ನೇ ಅಲುಗಿಸಲು ಸಮರ್ಥರಾಗಿದ್ದಾರೆ. ಇನ್ನೊಂದು ಮುಷ್ಟಿ ಅನ್ನವನ್ನು ಅವರಿಗೆ ನೀಡಿ. ಅವರ ಶಕ್ತಿಯನ್ನು ಒಳಗೊಳ್ಳಲು ಇಡೀ ಜಗತ್ತು ಸಾಲದಾಗುತ್ತದೆ. ರಕ್ತಬೀಜಾಸುರನಿಗೆ ಇದ್ದಂತಹ ಅಕ್ಷಯ ವಿದ್ಯೆ ಅವರಲ್ಲಿದೆ. ಅಂತಹ ಓಜಸ್ಸು ಪ್ರಪಂಚದ ಬೇರಾವ ಭಾಗದಲ್ಲಿಯೂ ಅಲಭ್ಯ.”

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು.೩೮೧)*

ಸ್ವಾಮೀಜಿ ತಮ್ಮ ‘ಪರಿವ್ರಾಜಕ’ ಎಂಬ ಲೇಖನದಲ್ಲಿ ಈ ಮೇಲಿನ ವಾಕ್ಯಗಳನ್ನು ಬರೆಯುತ್ತಾರೆ. ತಮ್ಮ ಪ್ರವಚನಗಳ ಹಾಗೂ ಲೇಖನಗಳ ನಡುವೆ ಭಾರತವನ್ನು ಕುರಿತ ವಿಷಯ ಬಂದಾಗ ಸ್ವಾಮೀಜಿ ಭಾವುಕರಾಗುತ್ತಾರೆ; ಹಾಗೂ ದೇಶದ ಬಗೆಗೆ ಅಪಾರ ಪ್ರೇಮ, ಕನಸು, ಯೋಜನೆಗಳು ಮುಕ್ತವಾಗಿ ಅವರಿಂದ ಹೊರಹೊಮ್ಮುತ್ತವೆ. ನಮ್ಮ ದೇಶವನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸುವ ಬಗ್ಗೆ ಅವರಿಗೆ ಸ್ಪಷ್ಟವಾದ ಕಲ್ಪನೆಯಿತ್ತು ಎಂಬುದನ್ನು ಅವರ ಮಾತುಗಳಿಂದ ನಾವು ಅರಿತುಕೊಳ್ಳಬಹುದು.

## ಸಮಗ್ರ ದೃಷ್ಟಿಯ ಆಧ್ಯಾತ್ಮಿಕತೆ

ಮಾತೃಭೂಮಿಯ ಬಗ್ಗೆ ಅಪಾರ ಪ್ರೇಮವನ್ನು ಹೊಂದಿದ್ದರೂ, ಸ್ವಾಮೀಜಿಯವರ ದೃಷ್ಟಿಕೋನ ಸಮಸ್ತ ವಿಶ್ವವನ್ನೇ ಆವರಿಸುವಷ್ಟು ವಿಶಾಲವಾಗಿತ್ತು. ಭಾರತದ ಏಳಿಗೆ, ಜನಸಾಮಾನ್ಯರ ಲೌಕಿಕ ಅಭಿವೃದ್ಧಿ, ವ್ಯಾಪಾರ-ವಾಣಿಜ್ಯ ಬೆಳವಣಿಗೆ ಇತ್ಯಾದಿಗಳ ಬಗ್ಗೆ ಸ್ವಾಮೀಜಿ ಎಷ್ಟೇ ಗಮನ ಕೊಟ್ಟರೂ, ಅವರ ವಿಶಾಲ ದೃಷ್ಟಿಕೋನದ ಹಿಂದಿದ್ದುದು ಸಮಸ್ತ ಮನುಕುಲದ ಒಳಿತನ್ನು ಬಯಸುವ ಆಧ್ಯಾತ್ಮಿಕ ಅನುಭವ. ಕೇವಲ ಸೀಮಿತ ಕ್ಷೇತ್ರದ, ಒಂದು ಜನಾಂಗದ, ಒಂದು ವರ್ಗದ ಉನ್ನತಿಯಿಂದ ಜಗತ್ತು ಉತ್ತಮಗೊಳ್ಳದು ಎಂಬ ಅರಿವು ಸ್ವಾಮೀಜಿಯವರಲ್ಲಿ ಸ್ಪಷ್ಟವಾಗಿತ್ತು. ವ್ಯಕ್ತಿ-ವ್ಯಕ್ತಿಗಳ, ಜನಾಂಗಗಳ ಹಾಗೂ ರಾಷ್ಟ್ರಗಳ ನಡುವೆ ಇರುವ ಪೈಪೋಟಿ, ಸಂಬಂಧ ಇವೆಲ್ಲ ಆರೋಗ್ಯಕರವಾಗಿರಬೇಕೇ ಹೊರತು ಯುದ್ಧ-ಕ್ರೌರ್ಯ-ವಿನಾಶಗಳಲ್ಲಿ ಕೊನೆಗೊಳ್ಳುವ ರೀತಿ ಇರಬಾರದೆಂದು ಸ್ವಾಮೀಜಿ ನಂಬಿದ್ದರು. ಪರಸ್ಪರ ನಂಬಿಕೆ, ಪ್ರೀತಿ, ವಿಚಾರ ವಿನಿಮಯ ಹಾಗೂ ಸಹಬಾಳ್ವೆ ಒಂದು ಸಮಾಜದ ವ್ಯಕ್ತಿಗಳ ನಡುವೆ ಎಷ್ಟು ಮುಖ್ಯವೋ, ಅಂತೆಯೇ ವಿವಿಧ ದೇಶಗಳ ನಡುವೆಯೂ ಮುಖ್ಯವೆಂಬುದನ್ನು ಸ್ವಾಮೀಜಿ ಒತ್ತಿ ಹೇಳುತ್ತಾರೆ. ಈ ಸಮಗ್ರ ದೃಷ್ಟಿಯು ಜೀವನದ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಬೇಕು. ಧರ್ಮ, ಸಂಸ್ಕೃತಿ, ವಿದ್ಯಾಭ್ಯಾಸ, ಪ್ರಗತಿ - ಇವೆಲ್ಲ ಮಾನವನ ಏಕತೆಯತ್ತ ಸಾಗಬೇಕು. ಹೀಗಿದ್ದರೆ ಮಾತ್ರವೇ ನಿಜವಾದ ಏಳಿಗೆ ಸಾಧ್ಯವೆಂಬುದು ಮೇಲಿನ ಸ್ವಾಮೀಜಿ ವಾಣಿಯಿಂದ ಸ್ಪಷ್ಟವಾಗುತ್ತದೆ.

## ಜನಸಾಮಾನ್ಯರ ಕಡೆಗೆ ಒತ್ತು

ಸ್ವಾಮಿ ವಿವೇಕಾನಂದರ ಮಾನವಪ್ರೀತಿ, ಜನಸಾಮಾನ್ಯರ ಮೇಲಿದ್ದ ಕಾಳಜಿ ಹಾಗೂ ದೀನ-ದಲಿತರ-ಬಡಜನರ ಮೇಲಿದ್ದ ಅನುಕಂಪ ಅಸದೃಶವಾದದ್ದು. ಅಮೆರಿಕದ ವಿಶ್ವವೇದಿಕೆಯ ಮುಂದೆ ನಿಂತಾಗಲೂ, ಮಹಾನ್ ಧೀಮಂತರ ಅತಿಥಿಗಳಾಗಿ ಕೀರ್ತಿಶಿಖರದಲ್ಲಿ ನೆಲೆನಿಂತಾಗಲೂ ಅವರ ಹೃದಯ ಮಿಡಿಯುತ್ತಿದ್ದುದು ಭಾರತದ ಬಡಜನರನ್ನು ಕುರಿತು. ಪಾಶ್ಚಾತ್ಯ ದೇಶಗಳಿಂದ ಮರಳಿ ಬಂದಮೇಲೆ, ಭಾರತದುದ್ದಕ್ಕೂ ಸಂಚರಿಸುವ ವೇಳೆ ಅವರು ಭವಿಷ್ಯ ಭಾರತವನ್ನು ಕಟ್ಟುವ ಕುರಿತಾಗಿ ತಮ್ಮ ದೇಶದ ಜನರಿಗೆ ಕರೆ ನೀಡುತ್ತಾರೆ. ತಮ್ಮ ಪ್ರವಚನಗಳಲ್ಲಿ ಅವರು ದೇಶದ ಅಭಿವೃದ್ಧಿಯೊಂದಿಗೆ ಜನಸಾಮಾನ್ಯರನ್ನು ಮೇಲೆತ್ತುವ ಕಾರ್ಯ ಅತ್ಯಗತ್ಯ ಎಂಬುದನ್ನು ಪದೇ ಪದೇ ಒತ್ತಿ ಹೇಳುತ್ತಾರೆ. ಪ್ರತಿಯೊಬ್ಬ ಭಾರತೀಯನೂ ತನ್ನ ಕಾಲಮೇಲೆ ತಾನು ನಿಂತು ದೇಶದ ಪ್ರಗತಿಗೆ ತನ್ನ ಕೊಡುಗೆ ನೀಡಬೇಕೆಂಬುದೇ ಅವರ ಆಶಯವಾಗಿತ್ತು. ಇದನ್ನು ಸಾಧಿಸುವುದಾದರೂ ಹೇಗೆ? ತ್ಯಾಗ ಮತ್ತು ಸೇವೆ - ಈ ಎರಡು ಆದರ್ಶಗಳನ್ನು ಅಳವಡಿಸಿಕೊಂಡು

ದುಡಿಯುವುದರಿಂದ. ಭಾರತದ ಆದರ್ಶವಾದ ಆಧ್ಯಾತ್ಮಿಕತೆ ಮತ್ತು ಲೌಕಿಕ ಜೀವನದ ಉನ್ನತಿ – ಇವೆರಡನ್ನೂ ಮೇಳೈಸುವುದರಿಂದ ಮಾತ್ರವೇ ನಮ್ಮ ದೇಶದ ಏಳಿಗೆ ಸಾಧ್ಯವೆಂದು ಸ್ವಾಮೀಜಿ ಅಭಿಪ್ರಾಯಪಡುತ್ತಾರೆ.

### ದುಡಿಮೆ, ಶ್ರಮ, ಲೌಕಿಕ ಬದುಕು

ಸ್ವಾಮೀಜಿ ಸ್ವತಃ ತಾವೇ ಕಾವಿವಸ್ತ್ರಧಾರಿಗಳಾದ ಸಂನ್ಯಾಸಿಯಾಗಿದ್ದರೂ, ಪ್ರಪಂಚವೆಂಬುದು ಮಾಯೆಯೆಂದು ಭಾವಿಸುವ ಅದ್ವೈತವಾದಿಯಾಗಿದ್ದರೂ ಅವರೆಂದಿಗೂ ಐಹಿಕ ಬದುಕನ್ನು ಹೀಗಳೆಯಲಿಲ್ಲ. ಆಧ್ಯಾತ್ಮಿಕ ಆದರ್ಶಕ್ಕೆ ಪೂರಕವಾಗುವಂತೆ ಲೌಕಿಕ ಬದುಕನ್ನು ಸುಭದ್ರವಾದ ನೆಲೆಯಲ್ಲಿ ಕಟ್ಟಿಕೊಳ್ಳಬೇಕೆಂದೇ ಅವರು ಎಲ್ಲೆಡೆ ಕರೆಕೊಟ್ಟರು. ಭಾರತದ ಆದರ್ಶವೇನೋ ಆ ಆಧ್ಯಾತ್ಮಿಕವಾದುದು ನಿಜ. ಸಾಕ್ಷಾತ್ಕಾರವೇ ಅಂತಿಮ ಗುರಿಯೆಂಬುದೂ ಸತ್ಯ. ಆದರೆ ವಾಸ್ತವಿಕ ಬದುಕು ದೈಹಿಕ, ಮಾನಸಿಕ ಸ್ತರಗಳನ್ನೂ ಒಳಗೊಂಡಿರುವುದರಿಂದ, ಮಿಥ್ಯಾ ಪ್ರಪಂಚದ ಭೌತಿಕ ನೆಲೆಗಳಲ್ಲಿಯೂ ಸೇರಿಕೊಂಡಿರುವುದರಿಂದ – ಅದನ್ನು ಮೆಟ್ಟಿ ನಿಲ್ಲದೆ ಉನ್ನತ ಹಂತಕ್ಕೇರಲಾಗದು. ಲೌಕಿಕ ಜೀವನದ ಭದ್ರ ನೆಲೆಯ ಮೇಲೆಯೇ ಆಧ್ಯಾತ್ಮಿಕ ಸೌಧವನ್ನು ನಿರ್ಮಿಸಬೇಕು. ಪ್ರಪಂಚವನ್ನು ದಾಟಿ ಹೋಗುವ ಮೊದಲು, ಪ್ರಪಂಚದಲ್ಲಿ ಸ್ಥಿರವಾಗಿ ಹೆಜ್ಜೆಗಳನ್ನು ಊರಬೇಕು. ಇದು ಸ್ವಾಮೀಜಿಯವರ ನುಡಿಗಳಲ್ಲಿ ಹೀಗೆ ವ್ಯಕ್ತವಾಗಿದೆ: '' ಇಹಲೋಕದಲ್ಲಿ ಹೊಟ್ಟೆಗೆ ಹಿಟ್ಟನ್ನು ಕೊಡದೆ ಪರಲೋಕದಲ್ಲಿ ಸಾಯುಜ್ಯ ಪದವಿಯನ್ನು ದಯಪಾಲಿಸುವ ದೇವರಲ್ಲಿ ನನಗೆ ನಂಬಿಕೆಯಿಲ್ಲ. ಭರತಖಂಡದ ಉದ್ಧಾರವಾಗಬೇಕು. ಬಡವರಿಗೆ ಹೊಟ್ಟೆ ತುಂಬ ಅನ್ನ ಕೊಡಬೇಕು. ವಿದ್ಯಾಭ್ಯಾಸ ಜನಸಮೂಹದಲ್ಲಿ ಹರಡಬೇಕು. ಪೌರೋಹಿತ್ಯದಿಂದ ಆಗುತ್ತಿರುವ ಅನ್ಯಾಯವನ್ನು ಕೊನೆಗಾಣಿಸಬೇಕು... ನಮ್ಮ ಸನಾತನ ಧರ್ಮವನ್ನು ಮುತ್ತಿಕೊಂಡಿರುವ ಪುರೋಹಿತರ ಅತ್ಯಾಚಾರ ಅನಾಚಾರಗಳೆಂಬ ಕಳೆಗಳನ್ನು ಕಿತ್ತೊಗೆದರೆ, ಜಗತ್ತಿನಲ್ಲೆಲ್ಲ ಸರ್ವಶ್ರೇಷ್ಠವಾದ ಹಿಂದೂಧರ್ಮ ನಿಲ್ಲುವುದು. '' *(ಕೃತಿಶ್ರೇಣಿ, ಸಂ.೪, ಪು. ೨೦೭–೮)*

ಪರಕೀಯರ ಆಕ್ರಮಣ, ದಬ್ಬಾಳಿಕೆಗಳಿಂದ ನಮ್ಮ ದೇಶದ ಆಂತಃಸತ್ತ್ವವೇ ನುಚ್ಚುನೂರಾಗಿದೆ; ಇದರಿಂದ ದೇಶವು ಗಾಢ ನಿದ್ರೆಗೆ ಜಾರಿದೆ ಎನ್ನುತ್ತಿದ್ದರು ಸ್ವಾಮೀಜಿ. ನಮ್ಮೆಲ್ಲ ಅವನತಿಗೂ ಈ ತಮಸ್ಸೇ ಕಾರಣ. ಮತ್ತೆ ಭಾರತ ಮೇಳೇಳಲು ನಾವು ತಮಸ್ಸನ್ನು ತೊರೆದು ಎಚ್ಚರಗೊಳ್ಳಬೇಕು; ಪ್ರಚಂಡ ಇಚ್ಛಾಶಕ್ತಿಯಿಂದ ದುಡಿಯಬೇಕು. ಈ ರೀತಿ ಜನರನ್ನು ಬಡಿದೆಬ್ಬಿಸಲು ಮತ್ತೆ ನಮ್ಮ ಗತವೈಭವವನ್ನು ನೆನಪಿಸುವ ಅಗತ್ಯವಿತ್ತು. ಸ್ವಾಮೀಜಿ ಈ ಕಾರ್ಯವನ್ನು ಅದ್ಭುತವೆಂಬಂತೆ ಮಾಡುತ್ತಾರೆ. ಸತ್ತ್ವಗುಣವೇ ನಮ್ಮ ಶಾಸ್ತ್ರ–ಪರಂಪರೆಗಳು ಸಾರುವ ಆದರ್ಶ. ಆದರೆ ಇತಿಹಾಸದ ಪುಟಗಳಲ್ಲಿ ಅದು ಇಂಗಿಹೋಯಿತು. ಘೋರ ತಮಸ್ಸು ಭಾರತದ ಜನತೆಯನ್ನು ಆವರಿಸಿತು. ಜನರಲ್ಲಿ ಜೀವಸತ್ತ್ವವೇ ಅಳಿದು, ದಾಸ್ಯಪ್ರವೃತ್ತಿ ಹಾಗೂ ಅಜ್ಞಾನ ತಾಂಡವವಾಡತೊಡಗಿತು. ಇದರಿಂದ ಹೊರಬರಲು ಬಲವಾದ ಹೊಡೆತವನ್ನು ನೀಡುವುದು ಕಾಲದ ಅಗತ್ಯವಾಗಿತ್ತು. ಮತ್ತೆ ನಮ್ಮ ದೇಶದ ಜನರಲ್ಲಿ ಕೆಚ್ಚನ್ನು ಕೆರಳಿಸುವ, ದೇಶಪ್ರೇಮವನ್ನು ಬಿತ್ತುವ, ಆತ್ಮವಿಶ್ವಾಸವನ್ನು ತುಂಬುವ ಕಾರ್ಯವನ್ನು ಸ್ವಾಮೀಜಿ ಮಾಡುತ್ತಾರೆ. ತಮೋಗುಣದಿಂದ ನೇರವಾಗಿ ಸತ್ತ್ವಗುಣವನ್ನು ಪಡೆಯುವುದು ಅಸಾಧ್ಯ. ಅದು ಅತ್ಯಂತ ನಿಧಾನಗತಿಯ ಪ್ರಯಾಣ. ಮೊದಲು ತಮೋಗುಣವನ್ನು ತೊಲಗಿಸಿ, ರಜೋಗುಣವನ್ನು ವೃದ್ಧಿಗೊಳಿಸಿಕೊಳ್ಳಬೇಕು. ಬಳಿಕ ಸತ್ತ್ವಗುಣದತ್ತ ಜನತೆ ಸಾಗಬೇಕು. ಇದು ಸಹಜವಾದ ಬೆಳವಣಿಗೆಯಾಗಬಹುದು. ಈ ದೃಷ್ಟಿಯಿಂದಲೇ ಸ್ವಾಮೀಜಿ ರಜೋಗುಣವನ್ನು, ಪ್ರಚಂಡ ಕ್ರಿಯೆಯನ್ನು ಪ್ರಚೋದಿಸುವ ಭಾವನೆಗಳನ್ನು ಭಾರತೀಯರಲ್ಲಿ ಬಿತ್ತಲು ಯತ್ನಿಸಿದರು.

ಜನರಿಗೆ ಮೂಲಭೂತ ಆವಶ್ಯಕತೆಗಳಾದ ಆಹಾರ, ವಸತಿ, ವಿದ್ಯಾಭ್ಯಾಸ ಮುಂತಾದವುಗಳನ್ನು ಒದಗಿಸುವುದು ಅತ್ಯಂತ ಮುಖ್ಯ. ಈ ದಿಕ್ಕಿನಲ್ಲಿ ಸ್ವಾಮೀಜಿ ಸೇವಾತತ್ತ್ವವನ್ನು ಹಾಗೂ ಕರ್ಮಯೋಗದ ಆದರ್ಶವನ್ನು ಎತ್ತಿ ಹಿಡಿದರು. ಅಧ್ಯಾತ್ಮವನ್ನು ಬಿಡದೆ ಲೌಕಿಕ ಬದುಕನ್ನು ಸಮರ್ಥವಾಗಿ ನಡೆಸುವ ದಾರಿ ಈ ಆದರ್ಶದಿಂದ ಸಾಧ್ಯವಾಗುತ್ತದೆ. 'ಕಾಯಕವೇ ಕೈಲಾಸ', 'ದುಡಿಮೆಯೇ ದೇವರು', 'ಅನ್ನವೇ ಬ್ರಹ್ಮ' ಮುಂತಾದ ಭಾವನೆಗಳು ಕರ್ಮಯೋಗದ ಅನುಷ್ಠಾನಕ್ಕೆ ಮತ್ತು ದೇಶದ ಪ್ರಗತಿಗೆ ಪೂರಕವಾಗುತ್ತವೆ.

### ಸಹನೆಯ ಶಕ್ತಿ

ಸ್ವಾಮೀಜಿ ತಮ್ಮ ನುಡಿಗಳಲ್ಲಿ ಭಾರತೀಯರ ಸಹನೆಯ ಶಕ್ತಿಯ ಕುರಿತಾಗಿ ಹೇಳುತ್ತಾರೆ: ''ಕ್ರೂರ ಪದಾಘಾತನ್ನು ಗೊಣಗಾಡದೆ ಸಹಿಸಿ ಸಹಿಸಿ ಅವರಲ್ಲೊಂದು ಅದ್ಭುತ ಸಹಿಷ್ಣುತೆ ತಲೆದೋರಿದೆ.'' ಇದು ದೌರ್ಬಲ್ಯವೆಂಬಂತೆ ಕಂಡುಬರಬಹುದು; ಆದೆ ಅದು ದೌರ್ಬಲ್ಯವಲ್ಲ, ಅದೇ ನಮ್ಮ ಜನರ ಶಕ್ತಿ. ಮುಂದುವರಿದು ಸ್ವಾಮೀಜಿ ಹೇಳುತ್ತಾರೆ, ''ಬೊಗಸೆ ಗಂಜಿಯನ್ನು ಕುಡಿದು ಜೀವಿಸುತ್ತಿದ್ದು, ಅವರು ಲೋಕವನ್ನೇ ಅಲುಗಿಸಲು ಸಮರ್ಥರಾಗಿದ್ದಾರೆ.'' ಈ ಸಹಿಷ್ಣುತೆಯ ಹಿಂದೆ ನೋವಿದೆ, ದಾರುಣ ವ್ಯಥೆಯಿದೆ, ತನ್ನನ್ನೇ ಹಳಿದುಕೊಳ್ಳುವ ಹತಾಶೆಯಿದೆ. ಆದರೆ ನಮ್ಮ ದೇಶದ ಆಂತರಿಕ ಶಕ್ತಿಯಿಂದ ಈ ಬಗೆಯ ಸಹಿಷ್ಣುತೆ ಬಂದಿದೆಯೆಂಬುದನ್ನು ಮರೆಯುವಂತಿಲ್ಲ. ಒಂದು ಬಾರಿ ನಮ್ಮ ಜನ ತಮ್ಮ ಕಷ್ಟಕೋಟಲೆಗಳಿಂದ ಹೊರಬಂದರೆ, ತಮ್ಮ ಆಂತರ್ಯದಲ್ಲಿ ಅಡಗಿರುವ ಅನಂತ ಶಕ್ತಿಯನ್ನು ಹೊರ ಹೊಮ್ಮಿಸುವರು ಎಂದು ಸ್ವಾಮೀಜಿ ಹೇಳುತ್ತಾರೆ. ಅಷ್ಟೇ ಅಲ್ಲ, ಭಾರತೀಯರ ವಿಶಿಷ್ಟಗುಣವನ್ನು ಕುರಿತು ಅವರು ಹೇಳುತ್ತಾರೆ: ''ರಕ್ತಬೀಜಾಸುರನಿಗೆ ಇದ್ದಂತಹ ಅಕ್ಷಯ ವಿದ್ಯೆ ಅವರಲ್ಲಿದೆ. ಅಂತಹ ಓಜಸ್ಸು ಪ್ರಪಂಚದ ಬೇರಾವ ಭಾಗದಲ್ಲಿಯೂ ಅಲಭ್ಯ.''

ಭಾರತೀಯರ ಆಂತರ್ಯದಲ್ಲಿ ಅಡಗಿರುವ ಪ್ರಚಂಡ ಶಕ್ತಿಯ ಅರಿವು ಸ್ವಾಮೀಜಿಗೆ ಸ್ಪಷ್ಟವಾಗಿ ಇತ್ತು. ಶತಶತಮಾನಗಳಿಂದಲೂ ಹರಿದು ಬಂದಿರುವ ಸಾಂಸ್ಕೃತಿಕ ಪರಂಪರೆಯು ಹೇಗೆ ಭಾರತೀಯರ ಜೀವನಾಡಿಯಾಗಿದೆ, ವೇದಕಾಲದಿಂದ ಇಂದಿನವರೆಗೂ ಅನೂಚಾನವಾಗಿ ಮುಂದುವರಿದುಕೊಂಡು ಬಂದ ಆಧ್ಯಾತ್ಮಿಕ ವಾಹಿನಿಯು ಹೇಗೆ ಇಲ್ಲಿನ ಜನಜೀವನವನ್ನು ರೂಪಿಸಿದೆ, ಇದೇ ಇಲ್ಲಿ ಜನರ ಗುಪ್ತವಾಮಿನಿ ಅಂತಃಸತ್ತ್ವವಾಗಿದೆ ಎಂಬುದನ್ನು ಸ್ವಾಮೀಜಿ ಹತ್ತಾರು ಕಡೆ ವಿವರಿಸುತ್ತಾರೆ; ಹೊಸ ತಲೆಮಾರಿನ ಜನತೆಗೆ-ವಿಶೇಷವಾಗಿ ಯುವಜನತೆಗೆ ಸರಿಯಾದ ಶಿಕ್ಷಣ, ತರಬೇತಿಯ ಅಗತ್ಯವಿದೆ ಎಂಬುದನ್ನು ಅವರು ಸಾರುತ್ತಾರೆ:

''ನಿಮಗೆ ಅಧ್ಯಾತ್ಮದಲ್ಲಿ ನಂಬಿಕೆ ಇರಲಿ ಇಲ್ಲದಿರಲಿ, ರಾಷ್ಟ್ರದ ಹಿತಕ್ಕಾಗಿ ಅಧ್ಯಾತ್ಮವನ್ನು ನಂಬಿ ಅದನ್ನು ರಕ್ಷಿಸಬೇಕು. ಅನಂತರ ಮತ್ತೊಂದು ಕೈಯಿಂದ ಇತರ ದೇಶಗಳಿಂದ ಏನನ್ನು ಬೇಕಾದರೂ ಪಡೆಯಿರಿ. ಆದರೆ ಅವು ಯಾವಾಗಲೂ ಪ್ರಧಾನ ಆದರ್ಶಕ್ಕೆ ಅಧೀನವಾಗಿರಬೇಕು. ಇದರಿಂದ ಅದ್ಭುತವಾದ, ವೈಭವಪೂರ್ಣವಾದ ಭವಿಷ್ಯ ಭಾರತವು ಮೂಡಿಬರುವುದು. ಅದು ಹಿಂದಿಗಿಂತ ಹೆಚ್ಚು ಭವ್ಯವಾಗುವುದು. ಅದು ಬರುತ್ತಿದೆ ಎಂದು ನಿಸ್ಸಂದೇಹವಾಗಿ ಹೇಳಬಲ್ಲೆ. ಹಿಂದಿನ ಋಷಿಗಳನ್ನು ಮೀರಿಸಿದ ಋಷಿಗಳು ಉದಯಿಸುವರು. ನಿಮ್ಮ ಪೂರ್ವಿಕರು ತೃಪ್ತರಾಗುವುದು ಮಾತ್ರವಲ್ಲ, ಇಷ್ಟು ಮಹಿಮಾವಂತರಾದ, ಪ್ರಖ್ಯಾತರಾದ ತಮ್ಮ ವಂಶಜರನ್ನು ನೋಡಿದಾಗ ಹೆಮ್ಮೆಪಡುವರು.'' *(ಕೃತಿಶ್ರೇಣಿ, ಸಂ.೩, ಪು. ೪೩)*

ಭಾರತದ ಇತಿಹಾಸದಲ್ಲಿ ಈ ಜನಾಂಗದ ವಿಶಿಷ್ಟ ಗುಣವಾದ ಸಹನಶಕ್ತಿಯನ್ನು ಉದ್ದಕ್ಕೂ ನಾವು ಗುರುತಿಸಬಹುದು. ಪ್ರಾಚೀನ ಕಾಲದಿಂದಲೇ ಯವನರು, ಹೂಣರು, ಕುಶಾನರು ಭಾರತಕ್ಕೆ ಬಂದಿದ್ದರು; ಆದರೆ ಅವರು ಈ ದೇಶದ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸಿದರು. ಅನಂತರ ಮೊಗಲರ, ಖಿಲ್ಜಿಗಳ ಮೂಲಕ, ಕೊನೆಗೆ ಪೋರ್ಚುಗೀಸ್-ಫ್ರೆಂಚ್-ಬ್ರಿಟಿಷ್ ಆಳ್ವಿಕೆಯ ಮೂಲಕ ದೇಶದಲ್ಲಿ ಪರಕೀಯರ ಪ್ರಭಾವ ವಿಸ್ತಾರಗೊಂಡಿತು. ಈ ಎಲ್ಲ ಆಕ್ರಮಣ ಹಾಗೂ ಆಳ್ವಿಕೆಗಳಿಂದ ಈ ದೇಶದ ಜನತೆ ತತ್ತರಿಸಿಹೋದರೂ, ಧೃತಿಗೆಡಲಿಲ್ಲ. ಹೊಸ ಸಂದರ್ಭಗಳಿಗೆ ತಕ್ಕಂತೆ ಜನಜೀವನವನ್ನು ರೂಪಿಸಿಗೊಂಡಿತು. ಎಲ್ಲ ಏರುಪೇರುಗಳ ನಡುವೆಯೂ ದೇಶದ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕಕ ವಾಹಿನಿ ನಿರಂತರ ಹರಿಯುತ್ತಲೇ ಬಂತು. ಇದನ್ನೇ ಸ್ವಾಮೀಜಿ ಹೇಳುತ್ತಾರೆ – ''ಭಾರತೀಯ ಸತ್ತ್ವಕ್ಕೆ ಇನ್ನೂ ಭಂಗ ಬಂದಿಲ್ಲ. ಭಾರತೀಯರು ಅದನ್ನು ತೊರೆದಿಲ್ಲ. ಅವರಲ್ಲಿ ಎಷ್ಟೇ ಮೂಢಭಕ್ತಿಯಿದ್ದರೂ ಆ ಸತ್ತ್ವ ಇನ್ನೂ ದೃಢವಾಗಿರುವುದು. ಅಲ್ಲಿ ಘೋರವಾದ ಮೂಢನಂಬಿಕೆಗಳಿವೆ. ಕೆಲವು ಅತ್ಯಂತ ಅಸಹ್ಯಕರವಾದವು; ಆದರೂ ಚಿಂತೆಯಿಲ್ಲ. ಜನಾಂಗದ ಆದರ್ಶ, ಅದರ ಜೀವನಾಡಿ, ಇನ್ನೂ ಮಿಡಿಯುತ್ತಿದೆ. ಈ ದೇಶದ ಆಧ್ಯಾತ್ಮಿಕ ಪ್ರವಾಹ ಇನ್ನೂ ಹರಿಯುತ್ತಲೆ ಇದೆ.'' *(ಕೃತಿಶ್ರೇಣಿ, ಸಂ.೬, ಪು. ೭)*

### ಭಾರತದ ಪ್ರಚಂಡ ಸಾಮರ್ಥ್ಯ

''ನೀವು ಧರ್ಮವನ್ನು ರಕ್ಷಿಸುದುದರಿಂದಲೇ, ಅದಕ್ಕಾಗಿ ಸರ್ವಸ್ವವನ್ನೂ ನೀವು ತ್ಯಾಗ ಮಾಡಿದುದರಿಂದಲೇ ಹಲವು ಶತಮಾನಗಳ ಆಘಾತವನ್ನು ಸಹಿಸುವುದು ನಿಮಗೆ ಸಾಧ್ಯವಾಯಿತು. ನಿಮ್ಮ ಪೂರ್ವಿಕರು ಎಲ್ಲ ಕೋಟಲೆಗಳನ್ನೂ ಮೃತ್ಯುವನ್ನೂ ಧೈರ್ಯದಿಂದ ಎದುರಿಸಿ ಧರ್ಮವನ್ನು ರಕ್ಷಿಸಿದರು.'' *(ಕೃತಿಶ್ರೇಣಿ, ಸಂ.೩, ಪು. ೧೬೨)*

ಇಲ್ಲಿನ ನೈತಿಕ, ಧಾರ್ಮಿಕ ಜೀವನವೇ ಜನಜೀವನದ ಶಕ್ತಿಯೆಂಬುದನ್ನು ಸ್ವಾಮೀಜಿ ಮನಗಾಣಿಸುತ್ತಾರೆ. ಇತರ ಜನಾಂಗಗಳ ಮೇಲೆ ದಾಳಿ ಮಾಡಿ ಗೆಲ್ಲುವುದು ಭಾರತದ ಪ್ರವೃತ್ತಿಯಲ್ಲ; ಆದರೆ ತನ್ನ ಆಧ್ಯಾತ್ಮಿಕ ಪ್ರಭಾವದಿಂದ ಅದು ಜಗತ್ತನ್ನು ಗೆಲ್ಲುವುದು. ಪ್ರಪಂಚದ ಎಲ್ಲ ಕಡೆಗಳಿಂದಲೂ ಇಲ್ಲಿನ ಆಧ್ಯಾತ್ಮಿಕ ಭಾವನೆಗಳನ್ನು ಸ್ವೀಕರಿಸುವರು. ಇದೇ ಈ ದೇಶದ ಶಕ್ತಿ. ವಿವಿಧ ಭೌಗೋಳಿಕ, ರಾಜಕೀಯ ಹಾಗೂ ಸಾಮಾಜಿಕ ಏರುಪೇರುಗಳ ನಡುವೆಯೂ ಇಲ್ಲಿನ ಜನರ ಬದುಕನ್ನು ಮುನ್ನಡೆಸುವ ಶಕ್ತಿಯೇ ಆಧ್ಯಾತ್ಮಿಕತೆ. ಪ್ರಾಚೀನ ಋಷಿಮುನಿಗಳ ಪರಂಪರೆಯಿಂದ ಆರಂಭಿಸಿ, ಪೌರಾಣಿಕ ಕಥಾನಕಗಳ ಮೂಲಕ ಸಾಗಿ ಬಂದು, ಹಲವು ಮಂದಿ ಅವತಾರಗಳ ಮತ್ತು ಸಾಧುಸಂತರುಗಳ ದಿವ್ಯಾನುಭವಗಳ ಕುಲುಮೆಯಲ್ಲಿ ಶುದ್ಧ ಚಿನ್ನದಂತೆ ಬೆಳಗಿದ ಆಧ್ಯಾತ್ಮಿಕ ಸತ್ಯಗಳು ಭಾರತದ ಜನಜೀವನವನ್ನು ರೂಪಿಸಿವೆ. ಹಲವು ಶತಮಾನಗಳ, ಸಹಸ್ರಮಾನಗಳ ಸುದೀರ್ಘ ಪಯಣದಿಂದ ನಮ್ಮ ದೇಶದ ಜನತೆ ಕಂಡುಕೊಂಡ ಸತ್ಯವಿದು-ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಆದರ್ಶವಿಲ್ಲದೆ ಈ ದೇಶ ಬದುಕಲಾರದು. ಈ ಆದರ್ಶಗಳೇ ಇದರ ಜೀವಾಳ. ಸ್ವಾಮೀಜಿ ಪ್ರಪಂಚ ವೇದಿಕೆಯ ಮುಂದಿಟ್ಟ ಭಾರತದ ಸಂದೇಶವಿದು. ನಮ್ಮ ನಾಡಿನ ಜನರಿಗೆ, ನಮ್ಮ ದೇಶದ ಏಳಿಗೆಗೆ ನೆರವಾಗುವಂತೆ ನೀಡಿದ ಕರೆಯಿದು. ✱

### ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಸೋಮವಾರ | ಏಕಾದಶಿ |
| ೧೧ | ಗುರುವಾರ | **ಶ್ರೀಶಾರದಾದೇವಿ ಜಯಂತಿ** |
| ೧೫ | ಸೋಮವಾರ | ಏಕಾದಶಿ |
| | | ಸ್ವಾಮಿ ಶಿವಾನಂದ ಜಯಂತಿ |
| ೨೪ | ಬುಧವಾರ | ಕ್ರಿಸ್ಮಸ್ ಈವ್ |
| ೨೬ | ಶುಕ್ರವಾರ | ಸ್ವಾಮಿ ಶಾರದಾನಂದ ಜಯಂತಿ |
| ೩೦ | ಮಂಗಳವಾರ | ಏಕಾದಶಿ |